# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ–49, ರಾಜರಾಜೇಶ್ವರಿ ನಗರ (ಹಳೆ ವಾರ್ಡ್ ಸಂಖ್ಯೆ.160) ರಲ್ಲಿ ದಿನಾಂಕ: 21.01.2023 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ಜನವರಿ–2023 ಮಾಹೆಯ ಮೂರನೇ ಶನಿವಾರದ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 21.01.2023 ರಂದು ನಡೆಸಲಾಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

### ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ.ಚಂದ್ರಶೇಖರ್ ರವರು ಚನ್ನಸಂದ್ರದ ಸಾಯಿ ಲೋಟಸ್ ಬಡಾವಣೆಯ ನಂದಿ ಮನೋಮಯ್ ಅಪಾರ್ಟ್‌ಮೆಂಟ್ ಹತ್ತಿರ ಬೀದಿ ದೀಪದ ಕಂಬ ಅಳವಡಿಸಲು ಹಿಂದಿನ ಸಭೆಯಲ್ಲಿ ದೂರು ನೀಡಿದ್ದರೂ,ಇನ್ನೂ ಅಳವಡಿಸಿರುವುದಿಲ್ಲವೆಂದು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆಗೆ ಕರೆ ಮಾಡಿ ಕ್ರಮ ಕೈಗೊಳ್ಳಲು ಸೂಚಿಸಿದರು.
- ಶ್ರೀ.ಬಾಬು ಎನ್ನುವವರು ರಾಜರಾಜೇಶ್ವರಿನಗರದ ಐಡಿಯಲ್ ಹೋಮ್ಸ್ ಬಡಾವಣೆಯ ಚರ್ಚ್ ಸುತ್ತಮುತ್ತಲ ರಸ್ತೆಗಳಿಗೆ ಡಾಂಬಾರೀಕರನ ಮಾಡಿರುವುದಕ್ಕೆ ಅಭಿನಂದನೆಯನ್ನು ತಿಳಿಸಿದರು.
- ಹಾಗೆಯೆ ರಸ್ತೆಗಳಲ್ಲಿ Banner and Flex ಇನ್ನು ನಿಂತಿಲ್ಲ.Flex ಮತ್ತು Banner ನ ತಯಾರಿಕಾ ಘಟಕಗಳನ್ನು ಮುಚ್ಚಲು High Court ಆದೇಶಿಸಿದರು ಇನ್ನೂ ರಾಜಾರೋಷವಾಗಿ ನೆಡೆಸುತ್ತಿದ್ದಾರೆ.ಸಂಬಂಧಪಟ್ಟ ಅಧಿಕಾರಿಗಳು, ಆಯುಕ್ತರುಗಳು ಏನು ಮಾಡುತ್ತಿದ್ದಾರೆ ಎಂದು ಸಾರ್ವಜನಿಕರು ಪ್ರಶ್ನಿಸಿದರು.
- ಶ್ರೀಮತಿ.ಉಷಾ ಎನ್ನುವವರು ನೆಹರೂ ರಸ್ತೆಯಲ್ಲಿ ನಿರ್ವಹಿಸುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಯಾವಾಗ ಪೂರ್ಣಗೊಳ್ಳುತ್ತದೆಯೆಂದು ಕೇಳಿದರು. ಹಾಗೂ ಮಳೆಗಾಲ ಆರಂಭಕ್ಕೂ ಮುನ್ನವೇ ಕಾಮಗಾರಿಯನ್ನು ಮುಗಿಸಲು ಕೋರಿದರು.
- ನೆಹರು ರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿಯಿಂದ ಅಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆ ಉಂಟಾಗುತ್ತಿದೆ. ಸದರಿ ರಸ್ತೆಯಲ್ಲಿ Traffic Jam ಆಗುತ್ತಿದ್ದು ಕಾಮಗಾರಿ ಮುಗಿಯುವವರೆಗೂ Traffic ವಿಭಾಗದ ಸಿಬ್ಬಂಧಿಯವರು Traffic Jam ಆಗದಂತೆ ಕ್ರಮ ವಹಿಸಬೇಕು ಎಂದು ಕೋರಿದರು.
- ಶ್ರೀ.ಮನೋಜ್ ಎನ್ನುವವರು ಕಾಮಗಾರಿಯ ಹೆಸರಿನಲ್ಲಿ ಆದಷ್ಟು ಮರಗಳನ್ನು ಕತ್ತರಿಸಲು ಕಡಿಮೆ ಮಾಡಲು ಹೇಳಿದರು.
- ಶ್ರೀಮತಿ .ಮಂಜುಳಾ ಎನ್ನುವವರು ಚನ್ನಸಂದ್ರ ಕಾಲೋನಿಯಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿ ಆಗಿದೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಕರೆ ಮಾಡಿ ಹೇಳಿದರು ಇನ್ನು ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

- ರಾಘವೇಂದ್ರ ಎನ್ನುವರು ಸಾಯಿ ಲೋಟಸ್ 5ನೇ ಕ್ರಾಸ್ ಹತ್ತಿರ CMC ನೀರು ಸರಬರಾಜು ಸ್ಥಗಿತವಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಿದರೆ ರಸ್ತೆ ಏರು ಪ್ರದೇಶದಲ್ಲಿದೆ ಎಂದು ಉತ್ತರಿಸಿದರು. ಅದಕ್ಕೆ ಏನಾದರು ವ್ಯವಸ್ಥೆ ಮಾಡಿ ಎಂದು ಕೋರಿದರು.
- ಶ್ರೀ.ಬಾಬು ಎನ್ನುವವರು ರಸ್ತೆಗಳಲ್ಲಿ ಅಪರಿಚಿತ ವ್ಯಕ್ತಿಗಳು ಅಲ್ಲಲ್ಲಿ ವಾಹನಗಳನ್ನು ಕೆಲವು ದಿನಗಳು, ವಾರಗಳು Parking ಮಾಡುತ್ತಾರೆ. ಅದಕ್ಕೆ ಸಂಬಂಧಪಟ್ಟ Traffic ಅಧಿಕಾರಿಗಳು ವಾಹನಗಳನ್ನು ಜಪ್ತಿ ಮಾಡಬೇಕು ಎಂದು ಕೋರಿದರು.

ಸಹಿ/-

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-49

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49

***ಪ್ರತಿಯನ್ನು:-***

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.